ಪ್ರಭಾವಶಾಲಿಯಾಗಿತ್ತೆಂದರೆ ಯಾರೂ ನನ್ನನ್ನು ಸಂದೇಹಿಸಲಿಲ್ಲ. ಬೇರೆ ಯಾರಾದರೂ ಇರಲಿ, ಸ್ವತಃ ಅರು ನನ್ನನ್ನು ಪೂರ್ತಿಯಾಗಿ ನಂಬತೊಡಗಿದಳು. ಅವಳೆಷ್ಟು ಮಾರು ಹೋದಳೆಂದರೆ...

"ಪಾಪ, ಫಿಲೋಮಿನ ತುಂಬಾ ಒಳ್ಳೆಯ ಮನಸ್ಸಿನ ಹೆಣ್ಣು. ವೃಥಾ ಅವಳನ್ನು ತಪ್ಪು ತಿಳಿದುಬಿಟ್ಟಿದ್ದೆ. ಪ್ರಪಂಚ ಸಾವಿರ ಹೇಳಲಿ. ನಾನು ನಂಬುವುದು ನನ್ನ ಗಂಡನನ್ನು ಮಾತ್ರ. ಈ ಹಾಲಿನಂಥ ಮನಸ್ಸಿನವರು ನನಗೆ ದ್ರೋಹ ಮಾಡಲು ಸಾಧ್ಯವೇ ಇಲ್ಲ" ಎಂದಿದ್ದಳು ಪಾಪದ ಅರು! ತುಂಬಾ ಉದಾರಹೃದಯದವಳು. ರಂಗನ್‌ಗೆ ಕೊಂಚ ಜಾಸ್ತಿಯಾಯಿತೇನೋ!

ಇದೇ ಅರು ಮೊದಲ ಬಾರಿಗೆ ನನ್ನ ಮನೆಗೆ ಬಂದ ದಿನವನ್ನು ನಾನು ಯಾವತ್ತೂ ಮರೆಯಲಾರೆ. ಕೋಪ ತಾಪದ ಚಂಡಿತನ ಒಂದು ಕಡೆಯಾದರೆ ನೋವು ಹತಾಶೆ ಇನ್ನೊಂದೆಡೆ. ಕಾಲಿಂಗ್ ಬೆಲ್‌ನ ಸದ್ದಿಗೆ ಬಾಗಿಲು ತೆರೆದಾಗ ಕುದಿಯುತ್ತಿದ್ದ ಹೃದಯ, ಜ್ವಲಿಸುತ್ತಿದ್ದ ಮುಖ ಹೊತ್ತು ನಿಂತಿದ್ದಳು ಅರು. ತುಸು ಗಾಬರಿಯಾದರೂ "ಓ! ಅರು. ಬಾ ಒಳಗೆ. ಹೇಗಿದ್ದೀಯಾ?" ಎಂದು ಅವಳ ಹೆಗಲು ಬಳಸಿ ಒಳನಡೆದೆ. ಧುಮುಗುಟ್ಟುತ್ತಾ ಒಳ ಬಂದವಳು "ಎಲ್ಲಿ? ರಂಗನ್ ಎಲ್ಲಿದ್ದಾನೆ?" ಎಂದು ದಾಢಸಿಯಾಗಿ ಒಳನುಗ್ಗಿ ನನ್ನ ಕೋಣೆ, ಅಡಿಗೆ ಮನೆ, ಬಚ್ಚಲು ಮನೆಗಳನ್ನೂ ಬಿಡದೆ ಹುಡುಕಿದಳು.

"ವಾಟ್ ಡೂ ಯೂ ಮೀನ್! ರಂಗನ್ ಇಲ್ಯಾಕೆ ಇರ್‍ತಾನೆ. ಆರ್ ಯು ಮ್ಯಾಡ್?" ಎಂದೆ ಸುಳ್ಳು ಕೋಪದಿಂದ.

"ಈ ಸಂಜೆ ನೀವಿಬ್ಬರು ಒಂದೇ ಕಾರಿನಲ್ಲಿ ನಿಮ್ಮ ಮನೆ ಕಡೆ ಬಂದಿರಂತೆ?" ಎಂದು ಉರಿದಾಗ, "ಹೌದು, ಸಂಜೆ ಮೀಟಿಂಗ್ ಮುಗಿದ ಮೇಲೆ ನನ್ನನ್ನು ಡ್ರಾಪ್ ಮಾಡಿ ಮನೆಗೆ ಹೋದನವ. ಕೂಲ್ ಅರು. ನಾನವನ ಪರ್ಸನಲ್ ಸೆಕ್ರೆಟರಿ ಅನ್ನೋದು ನಿನಗೆ ಗೊತ್ತಿದೆ ತಾನೆ" ಎಂದೆ. ತುಸು ವಿಚಲಿತಳಾದಳು. "ಆದರೂ, ನಿತ್ಯವೂ ಅವನೊಟ್ಟಿಗೆ ಕಾರಲ್ಲಿ ಡ್ರಾಪ್ ತಗಳ್ಳೋದು ಅಂದ್ರೆ... ತಪ್ಪಲ್ಲವಾ... ನೋಡಿದವರು ಏನಂದ್ಕೋತಾರೆ?" ಎಂದಳು.

"ಬೇರೆಯವರು ಏನೋ ಅಂದ್ಕೊಂಡರೆ ನಾನೇನೂ ಮಾಡಲಾಗುವುದಿಲ್ಲ. ಅವನು ನನ್ನ ಬಾಸ್. ಹಾಗೇ ನಮ್ಮಿಬ್ಬರಿಗೆ ಮುಂಚಿನಿಂದಲೂ ಹೆಚ್ಚೇ ಸ್ನೇಹ ಸಲಿಗೆಗಳಿವೆ. ನೀನು ತಿಳಕೊಂಡಂತೆ ಅಲ್ಲ" ಎಂದೆ ಗಡುಸಾಗಿ. "ಮತ್ತೆ... ನೀವು ಆಗಾಗ ಕಾಫೀ ಶಾಪ್‌ಗೂ ಹೋಗ್ತೀರ ಅಂತಾರಲ್ಲ..." ಎಂದಳು ಮುಗ್ಧ ಮಗುವಿನಂತೆ. "ನೋ ಚಾನ್ಸ್. ನಾವೇನು ಟೀನೇಜ್‌ನವರಾ... ಕಾಫೀಶಾಪ್ ಅಲ್ಲಿ ಟೈಮ್ ವೇಸ್ಟ್ ಮಾಡ್ಕೊಂಡು ಕೂತಿರೋಕೆ... ನಾನ್‌ಸೆನ್ಸ್" ಎಂದಿದ್ದೆ ಒರಟಾಗಿ. "ಸಾರಿ ಫಿಲೋಮಿನಾ ನಾನು ತಪ್ಪು ತಿಳಕೊಂಡಿರಬಹುದು" ಎಂದು ಹೇಳಿ ಮುಂದಿನ ನನ್ನ ಯಾವ ಮಾತಿಗೂ ಆಸ್ಪದವಿಲ್ಲದಂತೆ ಹೊರಟುಬಿಟ್ಟಳು.

"ನಾನು ರಂಗನ್ ಯಾವತ್ತೂ ಪ್ರೇಮಿಗಳು, ನಿನ್ನ ಮದುವೆ ಮಾಡ್ಕೊಂಡಿದ್ದು ಅವರಮ್ಮನ ಬಲವಂತಕ್ಕೆ" ಎಂದು ಸತ್ಯ ಹೇಳಲು ನನಗೆ ಯಾವುದೇ ಅಡ್ಡಿ ಇರಲಿಲ್ಲ. ಆದರೂ...

ನಿಜಕ್ಕೂ ಈ ಸುಳ್ಳಿನ ನಾಟಕ ಯಾವಾಗ ಶುರುವಾಯಿತೆಂದರೆ... ಹದಿನೈದು ದಿನ ರಂಗನ್ ಆಫೀಸಿಗೆ ಬರಲೇ ಇಲ್ಲವಂತೆ. ನಾನು ಆ ದಿನಗಳಲ್ಲಿ ದೆಹಲಿಯಲ್ಲಿ ಸ್ಪೆಷಲ್ ಪ್ರೋಗ್ರಾಮಿಗೆ ಹೋಗಿದ್ದೆ. ಮೊಬೈಲ್‌ಗಳಿರದ ದಿನಗಳವು. ನಿತ್ಯವೂ ಟ್ರೈನಿಂಗ್ ಮುಗಿಸಿ ರಾತ್ರಿ ಅವನ ಮನೆಗೆ ಫೋನು ಮಾಡಿದರೆ ಅವನ ತಂದೆಯೋ ತಂಗಿಯೋ ಅಜ್ಜಿಯೋ ತೆಗೆಯುತ್ತಿದ್ದರು. ರಂಗನ್ ತಾಯಿ ಹೃದಯಾಘಾತದಿಂದ ಆಸ್ಪತ್ರೆಯಲ್ಲಿದ್ದಾರೆಂದು ತಿಳಿಸಿದರು. ಅದು ನಿಜವೂ ಆಗಿತ್ತು. ಆದರೆ ಅದರಾಚೆಗಿನ ನಿಜ ನನಗಾಗ ತಿಳಿದಿರಲೇ ಇಲ್ಲ. ಪ್ರಜ್ಞಾಪೂರ್ವಕವಾಗಿ ನನ್ನನ್ನು ಅವನ